1. ನಿಲುವಳಿ ಸೂಚನೆ ಮಂಡಳಿಗೆ ಅನುಮತಿ ಕೋರಿಕೆ

ವಿಷಯ: ಬೆಂಗಳೂರು ನಗರದಲ್ಲಿ ಉಂಟಾದ ಬಾಂಬ್ ಸ್ಫೋಟದ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾವು ಇವೊತ್ತು ವಿರೋಧಪಕ್ಷದ ವತಿಯಿಂದ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: : ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣವೇ ತೆಗದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಇಡೀ ರಾಷ್ಟ್ರದ ಗಮನವನ್ನು ಸಳೆದಂಥ ವಿಚಾರವಾಗಿದೆ ಮತ್ತು ಈ ವಿಚಾರದಲ್ಲಿ ನಾವು ಆಸಕ್ತಿ ವಹಿಸಿ ಇಲ್ಲಿ ಚರ್ಚೆ ಮಾಡಲಿಲ್ಲ ಎಂದರೆ ನಿಜವಾಗಿ ನಮ್ಮ ವತಿಯಿಂದ ಲೋಪವಾಗುತ್ತಿದೆಯೆಂಬ ಆಪಾದನೆ ಬರಬಹುದು. ನಾವು ಇಲ್ಲಿ ಚರ್ಚೆ ಮಾಡಿ ಉತ್ತರವನ್ನು ಅಪೇಕ್ಷೆ ಪಟ್ಟು ಆ ಮೇಲೆ ಇಡೀ ರಾಜ್ಯದ ಜನತೆಗೆ ಬಾಂಬ್ ಬ್ಲಾಸ್ಟ್ ಬಗ್ಗೆ ಸರ್ಕಾರ ಏನು ಸಂದೇಶವನ್ನು ಕೊಡುತ್ತದೆ. ಏನು ಕ್ರಮತೆಗೆದುಕೊಂಡಿದ್ದಾರೆಂಬುದನ್ನೂ ಸ್ಪಷ್ಟ ಪಡಿಸಿದರೆ.....

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಎರಡೂ ಕಡೆಯಿಂದ ಪ್ರಶ್ನೋತ್ತರದ ಅವಧಿಯಾದ ನಂತರ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ ಉದ್ದೇಶವೇನೆಂದರೆ, ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ಇದಕ್ಕೆ ಮಹತ್ವ ಇದೆ ಮತ್ತು ರಾಷ್ಟ್ರದಲ್ಲಿ ಇದರ ಬಗ್ಗೆ ಜನರು ಕಾದು ನೋಡುತ್ತಿದ್ದಾರೆ. ಏನು ಘಟನಾವಳಿಗಳು ನಡೆಯಿತು? ಇದರ ಹಿನ್ನೆಲೆ ಏನು? ಸರ್ಕಾರ ಈ ಬಗ್ಗೆ ಏನು action ತೆಗೆದುಕೊಂಡಿದೆ? ಇಲ್ಲಿ ಸಾಮಾನ್ಯ ಜನರ ಜನಜೀವನ ಹೇಗೆ ನಡಿದಿದೆ? ಸುರಕ್ಷತೆಯ ಬಗ್ಗೆ ಏನು ಆಸಕ್ತಿಯನ್ನು ವಹಿಸಿದ್ದಾರೆ? ಸುಮಾರು ಏಳು ಕಡೆಗಳಲ್ಲಿ ಬಾಂಬ್ ಬ್ಲಾಸ್ಟ್ ಏನು ಆಯಿತು, ಅದರಲ್ಲಿ ಒಬ್ಬ ಹೆಣ್ಣು ಮಗಳು ಮತ್ತು ಸುಮಾರು ಐದು ಜನರು ಬಹಳ serious ಆಗಿ ಗಾಯಾಳುಗಳಾಗಿದ್ದಾರೆ. ಅದರಿಂದ ಆರ್ಥಿಕ ವ್ಯವಸ್ಥೆಗೂ ಕೂಡ ತೊಂದರೆ ಬರತಕ್ಕಂಥಾದ್ದು ಮತ್ತು ವಿದ್ಯಾರ್ಥಿಗಳು, ಮಕ್ಕಳು ಶಾಲೆಗೆ ಹೋಗುವಂಥದ್ದಕ್ಕೂ ಅಡಚಣೆ, ತೊಂದರೆ ಆಗಿದೆ. ಇಲ್ಲಿ ಆದ ಮೇಲೆ ಅಹಮದಾಬಾದ್‌ನಲ್ಲೂ ಈ ಘಟನೆ ನಡೆದಿದೆ, ಕೇರಳದಲ್ಲೂ ಕೂಡ alert ಮಾಡಿದ್ದಾರೆ, ತಮಿಳುನಾಡಿನಲ್ಲೂ ಕೂಡ ಇದರ ಬಗ್ಗೆ ಆತಂಕವನ್ನು

ವ್ಯಕ್ತಪಡಿಸಿದ್ದಾರೆ, ಹೀಗೆ ಇಡೀ ರಾಷ್ಟ್ರದಲ್ಲಿ ಒಂದು ಸಮಸ್ಯೆ ಇವೊತ್ತು ಆಗಿದೆ, ಈ ಸಮಸ್ಯೆಗೆ ನಾವೆಲ್ಲರೂ ಕೂಡ ಸ್ಪಂದಿಸುವಂಥದ್ದು ಇದೆ. ಕೇವಲ ಸರ್ಕಾರದ್ದೇತಪ್ಪು, ಪೊಲೀಸ್ ನವರದೇ ತಪ್ಪು, ಇಂಥವರದ್ದೇ ತಪ್ಪೆಂದು ಹೇಳುವುದಕ್ಕೆ ನಾನು ನಿಂತಿಲ್ಲ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಈಗ ಏನು ವಿಷಯವನ್ನು raise ಮಾಡಿದ್ದೀರಲ್ಲಾ, ಇದು ಇವತ್ತಿನ ಪರಿಸ್ಥಿತಿಯಲ್ಲಿ ಗಂಭೀರವಾದ ವಿಷಯವಾಗಿದೆ. ಅದರ ಬಗ್ಗೆ ಏನೂ ಪ್ರಶ್ನೆಯೇ ಇಲ್ಲ, ಈಗ ನನ್ನ ವಿನಂತಿ ಏನೆಂದರೆ, ಪ್ರಶ್ನೋತ್ತರದ ಅವಧಿಯ ನಂತರ ಮಾನ್ಯ ಗೃಹ ಸಚಿವರು ಸರ್ಕಾರದ ಪರ ಒಂದು statement ಕೊಡುತ್ತೇನೆಂದು ಹೇಳಿದ್ದಾರೆ. ಅದು ಆದಮೇಲೆ ಈ ವಿಷಯವನ್ನು ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರವಾದ ತಕ್ಷಣವೇ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೋತ್ತರಕ್ಕಿಂತಲೂ ಇದು important ಎಂದು ನನ್ನ ಅನಿಸಿಕೇ, ಏಕೆಂದರೆ ಪ್ರಶ್ನೋತ್ತರ ಇದು ಆದ ಮೇಲೂ ತೆಗೆದುಕೊಳ್ಳಬಹುದು. ಅದಕ್ಕೆ ಏನೂ ತೊಂದರೆ ಇಲ್ಲ, ಆದರೆ ಸದನ ನಡೆಯುವಾಗ ಈ ಘಟನೆ ನಡೆದು 2,3 ದಿವಸಗಳು ಆಯಿತು. Naturally, ಸದನ ಪ್ರಾರಂಭವಾದ ತಕ್ಷಣವೇ ಸರ್ಕಾರದ response ಏನಿದೆ, ಅಥವಾ ಇಡೀ ಸದನದಲ್ಲಿರುವಂಥ ಸದಸ್ಯರು ಇದರ ಬಗ್ಗೆ ಏನು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ, House ಯಾವ ರೀತಿಯಾಗಿ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡಿದೆ, ಎನ್ನುವಂಥಾದ್ದನ್ನು ಜನರು ಸಹ ಕಾದು ನೋಡುತ್ತಿದ್ದಾರೆ.

ಅಧ್ಯಕ್ಷರು: ನೀವು ಚರ್ಚೆ ಮಾಡಿ, ನಮ್ಮದೇನೂ ಅಭ್ಯಂತರವಿಲ್ಲ. ಸರ್ಕಾರದ ಗಮನ ಸೆಳೆಯುವಂಥಾದ್ದು, ವಿಷಯ ಪ್ರಸ್ತಾಪ ಮಾಡುವಂಥಾದ್ದನ್ನು ಮಾಡಿ. ನಾನು ಅದಕ್ಕೆ ಅವಕಾಶ ಕೊಡುತ್ತೇನೆ. ಆದರೆ, ಮೊದಲು ಪ್ರಶ್ನೋತ್ತರ ವೇಳೆ ಆಗಲಿ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಪ್ರಶ್ನೋತ್ತರವೇನು important ಅಲ್ಲ. ಇದು ಆದಮೇಲೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬಹುದು. ಈಗ ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಂತರ ಕೆಲವು ಜನ ಮಾತನಾಡುತ್ತಾರೆ, ಆಮೇಲೆ ಅವರು ಉತ್ತರ ಕೊಡಲಿ.

ಅಧ್ಯಕ್ಷರು: ಸರ್ಕಾರದವರು ಏನು ಹೇಳುತ್ತೀರಿ?

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿದಂಥ ವಿಷಯ ಬಹಳ ಗಂಭೀರವಾದಂಥಾದ್ದು ಎನ್ನುವುದನ್ನು

ಸರ್ಕಾರವೂ ಒಪ್ಪುತ್ತದೆ. ಆ ಘಟನೆಯ ಬಗ್ಗೆ 25ನೇ ತಾರೀಖಿನಿಂದ ಇಲ್ಲಿಯವರೆಗೆ ಏನೇನಾಗಿದೆ ಎನ್ನುವುದರ ಬಗ್ಗೆ ಸರ್ಕಾರ ತಾನಾಗಿಯೇ, ನಾವಾಗಿಯೇ ಒಂದು statement ಮಾಡುವವರಿದ್ದೇವೆ ಪ್ರಶ್ನೋತ್ತರ ಆದಮೇಲೆ ಅದನ್ನು ಮಾಡುತ್ತೇವೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದ ಪ್ರಶ್ನೆ. ಈಗ ಮುಖ್ಯಮಂತ್ರಿಗಳೂ ಇಲ್ಲಿದ್ದಾರೆ. ಬೆಂಗಳೂರಿನಲ್ಲಿ ಏನು ಪರಿಸ್ಥಿತಿ ಇದೆ ಎಂದರೆ, ಭಾನುವಾರ ನೌಕರರಿಗೆ ರಜೆ ಇರುವುದರಿಂದ ಬೆಂಗಳೂರಿನಲ್ಲಿ ಪ್ರತಿ ಭಾನುವಾರ ಜನಸಂದಣಿಯ ವಾತಾವರಣ ಇರುತ್ತಿತ್ತು. ಆದರೆ ನಿನ್ನೆಯ ದಿವಸ ಬೆಂಗಳೂರಿನಲ್ಲಿ ಒಂದು ರೀತಿಯ ಸ್ಮಶಾನ ಮೌನದ ವಾತಾವರಣವಿತ್ತು ಇದೊಂದು ಗಂಭೀರವಾದ ವಿಚಾರವಾಗಿರುವುದರಿಂದ ಇದನ್ನು ಕೂಡಲೇ ತೆಗೆದುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಮತ್ತು ಇದು ಬೇರೆಬೇರೆ ವಿಚಾರಗಳಾಗುತ್ತದೆ.ಇಂಥ ಒಂದು ಗಂಭೀರವಾದ ಚರ್ಚೆ ಮಾಡತಕ್ಕಂಥಾದ್ದು ಸಮಂಜಸವಾಗಿದೆ. ನಾವು ಸರ್ಕಾರವನ್ನು ತಮ್ಮ ಮೂಲಕ ವಿನಂತಿ ಮಾಡುತ್ತೇವೆ, ಈಗಾಗಲೇ ನಮ್ಮ ನಾಯಕರು ಕೂಡ ಹೇಳಿದ್ದಾರೆ. ಈ ಘಟನೆ ರಾಜ್ಯದ ರಾಜಧಾನಿಯಾದ ಬೆಂಗಳೂರಿನಂಥ ದೊಡ್ಡ ನಗರದಲ್ಲಿ ಆಗಿದೆ. ನಂತರ ಗುಜರಾತಿನ ಅಹಮದಾಬಾದಿನಲ್ಲಿ ಆಗಿದೆ. ಇವೆರಡರ ಹಿಂದೆ ಯಾವ ರೀತಿಯಾದ ಒಂದು ವ್ಯವಸ್ಥಿತವಾದ ಷಡ್ಯಂತ್ರ ಇದೆ, ಈ ರಾಷ್ಟ್ರದ ಏಕತೆ ಮತ್ತು ಸಮಗ್ರತೆಗೆ ಭಂಗ ತರತಕ್ಕಂಥ ಶಕ್ತಿಗಳೇನಿವೆ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಅದ್ದರಿಂದ ದಯಮಾಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಿ. ಜನರಿಗೆ ಶಾಂತಿ, ನೆಮ್ಮದಿಯ ವಾತಾವರಣವನ್ನು ಸೃಷ್ಟಿ ಮಾಡತಕ್ಕಂಥಾದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ನಾನು ತಮ್ಮ ಮೂಲಕ ವಿನಂತಿ ಮಾಡತ್ತೇನೆ, ಇದಕ್ಕಿಂಥ ಗಂಭೀರವಾದ ವಿಚಾರ ಮತ್ತೊಂದಿಲ್ಲ. ಬರೀ ರಾಜ್ಯದ ಜನರಲ್ಲ, ಈ ರಾಜ್ಯದಿಂದ ಹೋಗಿ ಬೇರೆಬೇರೆ ಕಡೆಗಳಲ್ಲಿ ವಾಸ ಮಾಡತಕ್ಕಂಥವರು E.mail ಗಳ ಮೂಲಕ ತಮ್ಮ ವಿಚಾರಗಳನ್ನು ತಿಳಿಸುತ್ತಿದ್ದಾರೆ. ಇದು ಗಂಭೀರವಾದ ವಿಚಾರವಾಗಿರುವುದರಿಂದ ದಯವಿಟ್ಟು ಈ ಸದನದಲ್ಲಿ ತಕ್ಷಣವೇ ಪ್ರಸ್ತಾಪವನ್ನು ಮಾಡಿ, ರಾಜ್ಯದ ಜನರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು, ಗೃಹ ಸಚಿವರು ಏನು ಸಂದೇಶವನ್ನು ಕೊಡುತ್ತಾರೋ, ರಾಜ್ಯದಲ್ಲಿ ಶಾಂತಿ, ನೆಮ್ಮದಿಗೋಸ್ಕರವಾಗಿ ಅವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ದಯಮಾಡಿ, ಸವಿಸ್ತಾರವಾಗಿ ಈ ಮೂಲಕ ರಾಜ್ಯದ ಜನರಿಗೆ ತಿಳಿಸಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ವಿಧಾನ ಮಂಡಲದ ಅಧಿವೇಶನ ಮುಂದಕ್ಕೆ ಹೋದ ಮೇಲೆ ಮತ್ತೆ ನಾವು ಈಗ ಸೇರುತ್ತಿದ್ದೇವೆ. ಸದನ ಮುಂದೆ ಹೋದ ಮೇಲೆ ಆದಂಥ ಘಟನೆ ಇದು. ಆ ಘಟನೆಗಳ ಬಗ್ಗೆ ನಮ್ಮ Home Minister Question Hour ಆದಮೇಲೆ ಒಂದು statement ಮಾಡುತ್ತಾರೆ. ಆದಮೇಲೆ ನೀವು clarification ಕೇಳಬಹುದು, ನಿಮ್ಮದೇನಾದರೂ ಸಲಹೆ ಇದ್ದರೆ ಕೊಡಬಹುದು ಎಂದು ನಾನು ಅತ್ಯಂತ ವಿನಯದಿಂದ ಹೇಳುತ್ತೇನೆ. ಬಹಳ ಪ್ರಮುಖವಾದಂಥ ವಿಷಯ ಇದು. ಇಡೀ ಸದನ ಈ ವಿಷಯವನ್ನು ರಾಜ್ಯದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಚರ್ಚೆ ಮಾಡಬೇಕಾಗುತ್ತದೆ. Home Minister ರವರನ್ನು ನಾನು ಸಂಪರ್ಕ ಮಾಡಿದ್ದೇನೆ. ಅವರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಅನೇಕ ವಿವರಗಳಿವೆ. ಅವರೂ ಸಹ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಮನೆಯಲ್ಲಿ ನಾವು ಏನೇನನ್ನು ಇತಿಮಿತಿಯೊಳಗೆ ಹೇಳಬೇಕೋ ಅದರ ಬಗ್ಗೆ ನಮ್ಮ Home Minister ಒಂದು statement ಮಾಡುತ್ತಾರೆ. ಅವರು ವಿವರವಾದ statement ಮಾಡಿದ ಮೇಲೆ ನೀವು question ಮಾಡುವುದಕ್ಕೆ, ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಭಾಧ್ಯಕ್ಷರು ಏನು ಹೇಳುತ್ತಾರೋ ಅದಕ್ಕೆ ನಾವು ಸಿದ್ಧರಿದ್ದೇವೆ. ನಾವೇ suo-motu ಆಗಿ statement ಮಾಡುತ್ತೇವೆ ಎಂದು ಹೇಳಿದ್ದೇವೆ. ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಸತ್ಸಂಪ್ರದಾಯವೆಂದರೆ, ಈ ರೀತಿಯ ಘಟನೆಗಳು ನಡೆದಾಗ ಸರ್ಕಾರವೇ statement ಮಾಡಬೇಕು ಎಂದು ನೀವು ನಿರೀಕ್ಷೆ ಮಾಡುತ್ತೀರಿ. ನಾವು statement ಮಾಡುತ್ತೇವೆ. ಆದಾದ ಮೇಲೆ, ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅಧ್ಯಕ್ಷರು ಯಾವ ರೀತಿ ಬೇಕಾದರೂ ಮಾಡಬಹುದು, ಚರ್ಚೆಗೆ ಅವಕಾಶ ಕೊಡಬಹುದು. ಆದ್ದರಿಂದ ದಯಮಾಡಿ question hour ಆದಮೇಲೆ Home Minister statement ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ನಾವು ಈ ವಿಚಾರದಲ್ಲಿ ಇಲ್ಲಿ ಏನು ಚರ್ಚೆ ಮಾಡುತ್ತೇವೆ ಎನ್ನುವುದನ್ನು ರಾಜ್ಯ ಮತ್ತು ರಾಷ್ಟ್ರಗಳೆರಡೂ ನೋಡುತ್ತಿವೆ. ಮುಖ್ಯವಾಗಿ, ನಾವು ಈ ಮನೆಯಿಂದ ಈ ರಾಜ್ಯದ ಜನತೆಗೆ ಯಾವ ರೀತಿ ಸಂದೇಶವನ್ನು ಕೊಡುತ್ತೇವೆ, ಯಾವ ರೀತಿಯ ಧೈರ್ಯವನ್ನು ಕೊಡುತ್ತೇವೆ ಎನ್ನುವುದು ಇಲ್ಲಿ ಬಹಳ ಮುಖ್ಯವಾದಂಥಾದ್ದು. ಆಮೇಲೆ, ನಾವು ಇದಕ್ಕೆ ಎಷ್ಟು ಗಮನವನ್ನು ಹರಿಸುತ್ತಿದ್ದೇವೆ ಎನ್ನುವುದು ಮುಖ್ಯವಾಗುತ್ತದೆ. ಇಲ್ಲಿ petty politics ಬೇಡ. ನಮಗೆ ಈ ವಿಚಾರದಲ್ಲಿ ರಾಜಕಾರಣ ಮಾಡುವುದಕ್ಕೆ

ಇಷ್ಟವಿಲ್ಲ. ನಾವು ಸರ್ಕಾರದ ಕೈಯನ್ನು ಬಲಪಡಿಸಬೇಕು. ಈ ದೇಶದಲ್ಲಿ, ಈ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಬೇಕು, ಈ ದೇಶದ ಐಕ್ಯತೆ, ಈ ದೇಶದ ಸಮಗ್ರತೆ, ಈ ದೇಶದ ಶಾಂತಿಗೋಸ್ಕರ ನಾವೆಲ್ಲ, ಪಕ್ಷ ಜಾತಿ, ಧರ್ಮ ಎಲ್ಲವನ್ನೂ ಬದಿಗಿಟ್ಟು ಒಟ್ಟಿಗೆ ನಿಲ್ಲಬೇಕು ಎನ್ನುವುದು ನಮ್ಮ ಆಸೆ. ಸಂದರ್ಭ ಹೀಗಿರುವಾಗ Question Hour ತೆಗೆದುಕೊಳ್ಳುವುದು ಸರಿಯಲ್ಲ. ಇಲ್ಲಿ issues defuse ಆಗಬಾರದು. ಬೇಕಾದರೆ ಸರ್ಕಾರ ಮೊದಲೇ statement ಮಾಡಲಿ. ಈ ವಿಷಯದ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು Adjournment Motion ತಂದಿದ್ದರೂ ಕೂಡ, ಇದರ ಬಗ್ಗೆ ಸರ್ಕಾರ ಆದರೆ statement ಮಾಡುವುದು ಬೇಡ ಎಂದು ನಾವು ಹೇಳುವುದಿಲ್ಲ. ಆದರೆ ಇದರ importance ಅನ್ನು ನೀವು ಕಳೆಯುವುದಕ್ಕೆ ಹೋಗಬೇಡಿ. ಆಮೇಲೆ ಬೇಕಾದರೆ ಸಾಯಂಕಾಲದವರೆಗೆ Question Hour ಗೆ ಕುಳಿತುಕೊಳ್ಳೋಣ. Ministers ಕುಳಿತುಕೊಳ್ಳುತ್ತಾರೆ. Members ಕುಳಿತುಕೊಳ್ಳುತ್ತಾರೆ. ಆಗ Question Hour ಅನ್ನು ಚರ್ಚೆ ಮಾಡೋಣ. ಆದರೆ, ಈ ಘಟನೆಯ ಬಗ್ಗೆ ಅವೊತ್ತಿನಿಂದ ಏನಾಯಿತು ಎನ್ನುವ ಬಗ್ಗೆ ಈಗ ಚರ್ಚೆ ಮಾಡಬೇಕಾಗಿದೆ. ನಮ್ಮ ಬೆಂಗಳೂರನ್ನು, ಈ ರಾಜ್ಯವನ್ನು, ಈ ದೇಶವನ್ನು ಕಾಪಾಡುವಂಥ ಜವಾಬ್ದಾರಿ ನಮ್ಮ ಎಲ್ಲ ಸಂಸದೀಯ ಪಟುಗಳಿಗಿದೆ. ಹೀಗಿರುವಂಥ ಸಂದರ್ಭದಲ್ಲಿ ದಯವಿಟ್ಟು ಇದನ್ನು ನೀವು prestige ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಇದರಲ್ಲಿ ನಮಗೇನೂ prestige ಇಲ್ಲ. ಈಗ ಅವಕಾಶ ಕೊಟ್ಟರೆ ನಿಮಗೂ ಗೌರವ ಹೆಚ್ಚಿಗೆ ಆಗುತ್ತದೆ. Yes, it is a important issue ಎಂದು ಹೇಳಿದ ಹಾಗಾಗುತ್ತದೆ. ಬೇಕಾದಷ್ಟು ಸಂದರ್ಭಗಳಲ್ಲಿ Question Hour ಮೂಂದೂಡಿದ history ಇದೆಯಲ್ಲ.? ರೈತರ ವಿಷಯಕ್ಕೆ ತೆಗೆದುಕೊಂಡಿದ್ದೇವೆ. ಬೇರೆಬೇರೆ ವಿಷಯಕ್ಕೆ ತೆಗೆದುಕೊಂಡಿದ್ದೇವೆ. ಯಾವುದೇ ಒಂದು ಸಣ್ಣ ಕೋಮು ಗಲಭೆಯ ವಿಚಾರಕ್ಕೆ ತೆಗೆದುಕೊಂಡಿದ್ದೇವೆ. ಇಂಥ ಎಲ್ಲ ಸಂದರ್ಭಗಳಲ್ಲಿ Question Hour ಅನ್ನು ಮುಂದಕ್ಕೆ ಹಾಕಿ ಅದನ್ನು ತೆಗೆದುಕೊಂಡಂಥ ಬೇಕಾದಷ್ಟು ಉದಾರಣೆಗಳಿವೆ. ಇದು ನಮ್ಮ ರಾಷ್ಟ್ರದ ಐಕ್ಯತೆ ವಿಚಾರ. ಇದರಲ್ಲಿ ದಯವಿಟ್ಟು ನಾವು ರಾಜಕಾರಣ ಮಾಡುವುದು ಬೇಡ. ಈ issue ಮೇಲೆ ಒಂದು statement ಮಾಡಲಿ. ಚರ್ಚೆಗೆ ಅವಕಾಶ ಕೊಡಿ. ಏಕೆಂದರೆ, ಅವರು ಇದರ ಬಗ್ಗೆ ಬೇಕಾದಷ್ಟು ಬೆಳಕನ್ನು ಚೆಲ್ಲುತ್ತಾರೆ. ಸರ್ಕಾರಕ್ಕೆ ಶಕ್ತಿ ಕೊಡಲಿಕ್ಕೆ ನಾವು ಸಿದ್ಧವಾಗಿದ್ದೇವೆ. ರಾಜಿ ಆಗಲಿಕ್ಕೆ ಸಿದ್ಧವಾಗಿದ್ದೇವೆ. ಎಲ್ಲ ತರಹದ ಪ್ರೋತ್ಸಾಹ ಕೊಡಲಿಕ್ಕೆ ಸಿದ್ಧವಾಗಿದ್ದೇವೆ. Question Hour ತೆಗೆದುಕೊಳ್ಳಬೇಕು ಎನ್ನುವ prestige ದಯವಿಟ್ಟು ಈ ವಿಚಾರಕ್ಕೆ ಮಾತ್ರ ಬೇಡ. ದಯವಿಟ್ಟು ಅವರು

ಒಂದು statement ಮಾಡಲಿ ನಂತರ, we will have a discussion.

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ಶಾಂತವಾದ ನಗರ ಏನಾಗಿತ್ತು, ಈಗ ಇಡೀ ಬೆಂಗಳೂರು panic ಆಗಿದೆ. Parents ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಬೇಕೇ, ಬೇಡವೇ ಎಂದು, ಕೆಲಸ ಮಾಡುವವರು ಕೆಲಸಕ್ಕೆ ಹೋಗಬೇಕೋ, ಬೇಡವೋ ಎನ್ನುವ fear psychosis has griped the entire city and the State. ಬೆಂಗಳೂರು ನಗರದಲ್ಲಿ ಘಟನೆಯಾದ ಮೇಲೆ ಅಹಮದಾಬಾದ್‌ನಲ್ಲಿ ಏನಾಯಿತು, ಇನ್ನೂ ಎಲ್ಲೆಲ್ಲಿ ಗಲಾಟೆಯಾಗುತ್ತದೆ ಎನ್ನುವ ವಾತಾವರಣ ಇದ್ದಾಗ, ಶಿವಕುಮಾರ್‌ರವರು ಹೇಳಿದ ಹಾಗೆ ನಾವು ಇದಕ್ಕೆ petty politics ಮಾಡುವುದು ಬೇಡ. ನಾನು ಹೇಳುತ್ತೇನೆ. ಸನ್ಮಾನ್ಯ ಯಡಿಯೂರಪ್ಪನವರೆ, ಈ terrorism ನಲ್ಲಿ anti-social elements ಯಾರಿದ್ದಾರೆ, ಯಾರು ದೇಶದ್ರೋಹಿಗಳಿದ್ದಾರೆ, ಅವರ ವಿರುದ್ಧ ನಾವು ಸರ್ಕಾರದ ಜೊತೆಗಿದ್ದೇವೆ. ಈ ಬಗ್ಗೆ ನಾವು party politics ಮಾಡುವುದಕ್ಕೆ ಹೋಗುತ್ತಿಲ್ಲ. ದಯವಿಟ್ಟು Question Hour ಆಮೇಲೆ ತೆಗೆದುಕೊಳ್ಳಿ. ಇದು ಬಹಳ impotant ವಿಷಯ. ಮೊದಲು ನಾವು ವಿಷಯವನ್ನು ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಅಪೇಕ್ಷೆ ಪಟ್ಟರೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ದೇನೂ ಅಭ್ಯಂತರವಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಬೇಕಾದರೆ ಅವರು ಮೊದಲು statement ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಚರ್ಚೆ ಮಾಡಿ. ಆಮೇಲೆ ನಾವು statement ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಮಗೆ ಧನ್ಯವಾದಗಳನ್ನು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದು ಬಹಳ ಮಹತ್ವವಾದ ವಿಷಯ ಎಂದು ಹೇಳಿ, ತಾವು ನಿಲುವಳಿ ಸೂಚನೆಯನ್ನು ಒಪ್ಪಿಕೊಂಡು ಚರ್ಚೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಒಂದು ಐತಿಹಾಸಿಕ ನಿರ್ಣಯವನ್ನು ತಾವು ತೆಗೆದುಕೊಂಡಿದ್ದೀರಿ ಎಂದು ನಾನು.....

ಅಧ್ಯಕ್ಷರು : ನೀವು preliminary submission ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇನ್ನೂ ನಾನು ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಗಮನ ಹರಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು

ಎಂದರೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಅಭ್ಯಂತರವಿಲ್ಲ, ಅದು ಯಾವ ರೂಪದಲ್ಲಿ ನೀವು ಚರ್ಚೆಗೆ ಅವಕಾಶ ಕೊಡುತ್ತೀರೋ ಅದು ನಿಮಗೆ ಬಿಟ್ಟಿದ್ದು ಎಂದು ಹೇಳಿದರು. ಇದನ್ನು ಯಾವ ರೂಪದಲ್ಲಿ ಚರ್ಚೆ ಮಾಡಬೇಕು ಎನ್ನುವ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ. ಈಗ ಇಲ್ಲಿ ಅಭಿನಂದನೆ ಹೇಳುವಂಥಾದ್ದು ಧನ್ಯವಾದ ಹೇಳುವಂಥಾದ್ದು ಬೇಡ. ವಿಷಯ ಬರಲಿ. ನಾನು ಬಹಳ careful ಆಗಿದ್ದೇನೆ. ನೀವು ಯಾವ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಕೊಡಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಇಲ್ಲಿ ಒಂದೇ ಒಂದು ಪ್ರಶ್ನೆ ಇತ್ತು. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೋ, ಇದನ್ನೂ ತೆಗೆದುಕೊಳ್ಳಬೇಕೋ ಎನ್ನುವುದಿತ್ತು ಪ್ರಶ್ನೋತ್ತರ ಆದಮೇಲೆ ಇದಕ್ಕೆ ಅವಕಾಶ ಕೊಡೋಣ ಎನ್ನುವುದು ನನ್ನ ಅಭಿಪ್ರಾಯವಾಗಿತ್ತು. ಇದನ್ನು ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಎಂದು ಸರ್ಕಾರದ ಪರವಾಗಿ ಈಗ ಅವರು ಹೇಳಿದರು. ನೀವು ಈಗ preliminary ಯಾಗಿ start ಮಾಡಿ. ಮುಂದೆ ಅದನ್ನು ಯಾವ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಬೇಕೋ ಹಾಗೆ ನಾನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಒಂದು ಐತಿಹಾಸಿಕ ನಿರ್ಣಯವನ್ನು ತೆಗದುಕೊಂಡಿದ್ದೀರಿ, ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಗಮನ ಹರಿಸಬೇಕು, ನಾನು ಐತಿಹಾಸಿಕ ನಿರ್ಣಯವನ್ನೇ ಕೊಡುತ್ತೇನೆ. ಇದನ್ನು ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಿ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹೀಗಾಗಿ ಈ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ತಾವು ನಿಲುವಳಿ ಸೂಚನೆಯನ್ನೇನು ತಂದಿದ್ದೀರಿ, ಇದನ್ನು Rule 69 ಗೆ convert ಮಾಡಿ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೇನೆ. ಚರ್ಚೆಯನ್ನು ಪ್ರಾರಂಭ ಮಾಡಿ.

ಆ) ನಿಯಮ 69ರ ಅಡಿಯಲ್ಲಿ ಚರ್ಚೆ

ಶ್ರೀ ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು): ನಮ್ಮ ಪ್ರಸ್ತಾವನೆ ಏನೆಂದರೆ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ದಿ: 25–07–2008ರ ಶುಕ್ರವಾರ ಬೆಂಗಳೂರು ನಗರದಲ್ಲಿ ಸುಮಾರು 7 ಕಡೆ ಏನು ಬಾಂಬ್ ಸ್ಫೋಟವಾಗಿದೆ, ಇದರಲ್ಲಿ ಒಬ್ಬ ಮಹಿಳೆ ಮರಣ ಹೊಂದಿದ್ದಾರೆ ಮತ್ತು 5 ಜನರು ಅತ್ಯಂತ serious ಆಗಿ ಆಸ್ಪತ್ರೆಯಲ್ಲಿದ್ದು, ಅವರು ಚಿಕಿತ್ಸೆಗೊಳಪಡುತ್ತಿದ್ದಾರೆ. ಇನ್ನೂ ಹಲವಾರು ಜನರು ಸಣ್ಣಪುಟ್ಟ ಗಾಯಗಳಾಗಿ